**ಅಸಲು ದಾವಾ ಸಂಖ್ಯೆ - 27/2018** **ಪಿ.ಡಬ್ಲ್ಯೂ:-1**

ದಿನಾಂಕಃ **01-04-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-**

ದಾವಾ ಆಸ್ತಿದ ಸರ್ವೆ ನಂ.19/1 ರ ವಿಸ್ತೀರ್ಣ 2 ಎಕರೆ 13 ಗುಂಟೆ ಇರುತ್ತದೆ. ದೇವಿರಮ್ಮ ನನಗೆ ಅಜ್ಜಿಯಾಗಬೇಕು ಮತ್ತು ನನ್ನ ತಂದೆಗೆ ದೊಡ್ಡಮ್ಮನಾಗಬೇಕು. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದೇವಿರಮ್ಮ ನನ್ನ ತಂದೆಗೆ ದೊಡ್ಡಮ್ಮನಾಗಬೇಕು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ದೇವಿರಮ್ಮರವರು 1999 ರಲ್ಲಿ ಮೃತರಾಗಿರುತ್ತಾರೆ. ದೇವಿರಮ್ಮನಿಗೆ ಮಹಾಂತಮ್ಮ ಎಂಬ ಒಬ್ಬಳೇ ಹೆಣ್ಣು ಮಗಳು ಇರುತ್ತಾಳೆ. ಮಹಾಂತಮ್ಮ ರವರಿಗೆ ಎಂ.ಜಿ ಭುವನೇಶ್ವರಪ್ಪ ಎಂಬ ಒಬ್ಬ ಮಗ ಇದ್ದರೆ ಎಂದರೆ ಸರಿ. ದೇವಿರಮ್ಮ ತಮ್ಮ ಜೀವಿತಾ ಕಾಲದಲ್ಲಿ ಮತ್ತು ತನ್ನ ಕೊನೆಯ ಕಾಲದಲ್ಲಿ ಗಂಡನ ಮನೆಯಲ್ಲಿ ಇದ್ದರು. ದೇವಿರಮ್ಮರವರನ್ನು ಕೊನೆಯ ಕಾಲದಲ್ಲಿ ಎಂ. ಜಿ ಭುವನೇಶ್ವರಪ್ಪ ನೋಡಿಕೊಳ್ಳುತ್ತಿದ್ದರು.

ದೇವಿರಮ್ಮರವರಿಗೆ ಮರಣ ಹೊಂದುವ ಸಮಯದಲ್ಲಿ ಅವರಿಗೆ ಎಷ್ಟು ವಯಸ್ಸು ಆಗಿತ್ತು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ದೇವಿರಮ್ಮರವರಿಗೆ ತಮ್ಮ ಜೀವಿತಾದ ಕೊನೆಯ ಕಾಲದಲ್ಲಿ ಸ್ವತಃ ಇನ್ನೊಬ್ಬರ ಸಹಾಯವಿಲ್ಲದೇ ಪೇಟೆ ಮತ್ತು ಪಟ್ಟಣಕ್ಕೆ ಹೋಗಲು ಆಗುತ್ತಿರಲಿಲ್ಲ ಎಂದರೆ ಸರಿ. ದೇವಿರಮ್ಮರವರಿಗೆ ಕೊನೆಯ ಕಾಲದಲ್ಲಿ ವಯೋವೃದ್ಧ ಕಾಯಿಲೆಗಳಾದ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಮತ್ತು ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಖಾತೆಯು ಈಗ ಹಾಲಮ್ಮರವರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 2 ಎಕರೆ 13 ಗುಂಟೆ ಇರುತ್ತದೆ. ದಾವಾ ಆಸ್ತಿಯು ಪೌತಿ ಆಧಾರದ ಮೇಲೆ ದೇವಿರಮ್ಮರವರ ಹೆಸರಿನಿಂದ ಭುವನೇಶ್ವರಪ್ಪರವರ ಹೆಸರಿಗೆ ನಂತರ ಹಾಲಮ್ಮನ ಹೆಸರಿಗೆ ಬಂದಿದೆ ಎಂದರೆ ಸರಿ. ದೇವಿರಮ್ಮರವರು ತಮ್ಮ ಜೀವಿತಾ ಕಾಲದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಮರಣ ಶಾಸನ ಆಗಲೀ ಅಥವಾ

ಯಾವುದೇ ಪತ್ರವನ್ನು ಆಗಲೀ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದೇವಿರಮ್ಮರವರು ತಮ್ಮ ಜೀವಿತಾ ಕಾಲದಲ್ಲಿ ಮರಣ ಶಾಸನ ಪತ್ರಮ್ನು ನನ್ನ, ಭುವನೇಶ್ವರಪ್ಪ ಮತ್ತು ವೀರಪ್ಪರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದೇವಿರಮ್ಮರವರು ತಮ್ಮ ಜೀವಿತಾ ಕಾಲದಲ್ಲಿ ಯಾವುದೇ ಮರಣ ಶಾಸನವನ್ನು ನನ್ನ, ಭುವನೇಶ್ವರಪ್ಪ ಮತ್ತು ವೀರಪ್ಪರವರ ಹೆಸರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದೇವಿರಮ್ಮರವರಿಗೆ ತಮ್ಮ ಕೊನೆಯ ಕಾಲದಲ್ಲಿ ಕಣ್ಣು ಮತ್ತು ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದೇವಿರಮ್ಮರವರು ಮರಣ ಶಾಸನವನ್ನು 1995-96 ನೇ ಸಾಲಿನಲ್ಲಿ ಬರೆದುಕೊಟ್ಟಿರುತ್ತಾರೆ. ಆ ಸಮಯದಲ್ಲಿ ಅವರು ಆರೋಗ್ಯವಾಗಿದ್ದರು ಎಂದು ನುಡಿಯುತ್ತಾರೆ. ವೀರಪ್ಪರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಭವನೇಶ್ವರಪ್ಪರವರ ವಾರಸುದಾರರು ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭಲ್ಲಿ ಇದ್ದರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ದೇವಿರಮ್ಮರವರು ಬರೆದುಕೊಟ್ಟ ಮರಣ ಶಾಸನ ಪ್ರಮಾಣ ಪತ್ರದ ಮೂಲ ಪ್ರತಿ ಪ್ರತಿವಾದಿಯ ಬಳಿ ಇರುತ್ತದೆ. ಅದರ ದೃಢೀಕೃತ ನಕಲನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ದೇವಿರಮ್ಮರವರು ಯಾವುದೇ ಮರಣ ಶಾಸನವನ್ನು ಬರೆದುಕೊಟ್ಟಿಲ್ಲ ಮತ್ತು ಭುವನೇಶ್ವರಪ್ಪರ ಬಳಿ ಮರಣ ಶಾಸನದ ಮೂಲ ಪ್ರತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದರೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.